**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1401
ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ.ಎಂ.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 30.12.2022

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸಾರಿಗೆ ಇಲಾಖೆಯು ಆಯುಧ ಪೂಜೆಗೆಂದು KSRTC ಬಸ್‌ಗಳಿಗೆ ಹಣ ನೀಡುತ್ತಿದೆಯೇ; ಎಷ್ಟು ವರ್ಷಗಳಿಂದ ಹಣ ನೀಡಲಾಗುತ್ತಿದೆ; ಪ್ರತಿ ಬಸ್‌ನ ಪೂಜೆಗೆ ಎಷ್ಟು ಹಣವನ್ನು ನೀಡಲಾಗುತ್ತಿದೆ; | ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು 1996ನೇ ಸಾಲಿನಿಂದ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ 2021ನೇ ಸಾಲಿನಿಂದ ಆಯುಧ ಪೂಜೆಗೆಂದು ಬಸ್‌ಗಳಿಗೆ ಹಣ ನೀಡುತ್ತಿದ್ದು, ಪ್ರತಿ ಬಸ್‌ಗೆ ಕ.ರಾ.ರ.ಸಾ.ನಿಗಮ, ಬೆಂ.ಮ.ಸಾ.ಸಂಸ್ಥೆ, ಕ.ಕ.ರ.ಸಾ.ನಿಗಮಗಳು ರೂ.100/- ಮತ್ತು ವಾ.ಕ.ರ.ಸಾ.ಸಂಸ್ಥೆಯು ರೂ.50/-ರಂತೆ ಹಣ ನೀಡುತ್ತಿದೆ. |
| ಆ | ಇಲಾಖೆಯಿಂದ ನೀಡಲಾಗುತ್ತಿರುವ ಹಣದಲ್ಲಿ ಪೂಜಾ ಸಾಮಾಗ್ರಿಗಳನ್ನು ಖರೀದಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಆಯುಧ ಪೂಜೆಗೆ ನೀಡಲಾಗುತ್ತಿರುವ ಹಣವನ್ನು ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವಾಗ ಹೆಚ್ಚಳ ಮಾಡಲಾಗುವುದು? | ಹೌದು ಗಮನಕ್ಕೆ ಬಂದಿದೆ.<br>ಕೋವಿಡ್-19ರ ಕಾರಣದಿಂದ ಸಂಸ್ಥೆಗಳ ಆರ್ಥಿಕ ಸ್ಥಿತಿಗತಿ ಉತ್ತಮವಾಗಿಲ್ಲದಿರುವ ಕಾರಣ ಪೂಜೆಗೆ ನೀಡಲಾಗುತ್ತಿರುವ ಹಣವನ್ನು ಹೆಚ್ಚಿಸುವ ಪ್ರಸ್ತಾವ ಇರುವುದಿಲ್ಲ. |
| ಇ | ಪ್ರಸ್ತುತ ಮಾರುಕಟ್ಟೆಯಲ್ಲಿ ಸಾಮಾಗ್ರಿಗಳ ಬೆಲೆಯನ್ನು ಆಧರಿಸಿ ಪೂಜಾ ಸಾಮಾಗ್ರಿಗೆ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೆ; ಅಥವಾ ಎಷ್ಟು ಮೊತ್ತದ ಹಣ ಹೆಚ್ಚಳ ಮಾಡಲಾಗುವುದು? | |

ಸಂಖ್ಯೆ: ಟಿಡಿ 352 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

Scanned with CamScanner